



ಮನುಷ್ಯತ್ವ ಅನ್ನೋ ದ್ರವವನ್ನು ಹನಿಹನಿಯಾಗಿ ಕಳೆದುಕೊಳ್ಳುವಾಗ ಕನಿಷ್ಠ ಪಕ್ಷ ನಮಗಾದರೂ ಅದರ ಅರಿವಾಗಬಾರದು. ಅಂದರೆ, ಒಂದು ಘಳಿಗೆ ಸುಖವಾಗಿ ಕಣ್ಣುಮುಚ್ಚಲಾದರೂ ಸಾಧ್ಯ. ನಮ್ಮ ರಾಜಕಾರಣಿಗಳು ಇರುವುದಿಲ್ಲವೇ? ಅತ್ತ ಸಾವಿರ ಸಾವಿರ ಕೋಟಿ ನುಂಗಿ, ಇತ್ತ ಹೋಮ ಹವನ ಮಾಡಿ ಬ್ಯಾಲೆನ್ಸ್ ಮಾಡಿಕೊಂಡು ಮತ್ತೆ ತಲೆ ಎತ್ತಿಯೇ ತಿರುಗುತ್ತಾರಲ್ಲ. ಇದ್ದರೆ ಆ ಥರ ಇರಬೇಕು. ಅಂದರೆ, ಒಂದು ನೆಮ್ಮದಿ. ಆದರೆ, ಇದೇನು ಈ ಕರ್ಮ! ಮಾಡಿದ್ದನ್ನು ಮನಸಾ ಒಪ್ಪಿಕೊಳ್ಳುವ ಹಾಗೆಯೂ ಇಲ್ಲ, ಹಾಗೆ ಮಾಡಬಾರದಿತ್ತು ಅಂತ ಪಶ್ಚಾತ್ತಾಪ ಪಡುವಂತೆಯೂ ಇಲ್ಲ. ಹೀಗೆ ಅಂತರದಲ್ಲಿ ತೇಲುವ ಹಿಂಸೆ ಯಾರಿಗೂ ಬೇಡ. ಸುನೇತ್ರಾಳ ಕೊಲೆಯ ಸಂಚಿನ ಕುರಿತು ಇಂಥವೇ ನನ್ನದು ಹಳವಂಡ.

ಕೊಲೆ ಅಂದರೆ ಕೊಲೆ ಅಲ್ಲ. "ತಪ್ಪಿಯೂ ಆ ಶಬ್ದವನ್ನು ಎಲ್ಲಿಯೂ ಉಪಯೋಗಿಸಬೇಡಿ ಸಾರ್. ಈಗೀಗ ಎಲ್ಲೆಲ್ಲಿ ಕಿವಿಗಳಿರುತ್ತವೆ ಹೇಳೋಕಾಗೋದಿಲ್ಲ. ಮನಸ್ಸಿನಲ್ಲಿ ಹೇಳಿಕೊಂಡರೂ ಕೇಳಿಸುತ್ತದಂತೆ ಈಗಿನ ಕಾಲದಲ್ಲಿ. ಅವಳು ಹೋಗುವವಳಂತೂ ಹೋಗುತ್ತಾಳೆ. ನೀವು ಆ ಶಬ್ದ ಪ್ರಯೋಗ ಮಾಡಿ ಉಳಿದವರನ್ನ ಪಾಶಿಗೆ ಹಾಕಬೇಡಿ" ಎನ್ನುತ್ತಾನೆ ದಾದಾ. ಈ ದಾದಾನ ಹೆಸರೇನೆಂದೂ ನನಗೆ ಗೊತ್ತಿಲ್ಲ. ನಾವದನ್ನ ಕೇಳಲೂ ಬಾರದಂತೆ. ಹಬ್ಬಕ್ಕೆ ತರುವ ಗಣೇಶನ ಮೂರ್ತಿಯ ಜೊತೆಗೇನೇ ಮೂರ್ತಿಗಂಟಿಕೊಂಡೇ ಹಾರ–ಪ್ರಭಾವಳಿಗಳು ಬರುತ್ತವಲ್ಲ, ಹಾಗೆ ತನ್ನ ಚೇಲಾಗಳ ಪ್ರಭಾವಳಿಯ ಜೊತೆಗೇ ಈ ದಾದಾ ಆಫೀಸಿನ ಹಿಂದಿನ